ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4
(ಸಿವಿಲ್)

## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ.

ಎಸ್.ಸಿ.ಸಂಖೆ54:/2008

ಪ್ರಾಸಾ 07

ಚಾಸಾ 26

ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕಃ 04.02.2019

| | | |
|---|---|---|
| ಸಾಕ್ಷಿಯ ಹೆಸರು | : | ಎ. ಮುನಿರೆಡ್ಡಿ |
| ತಂದೆಯ ಹೆಸರು | : | ಜಿ. ಆವಲಪ್ಪ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ನಿವೃತ್ತ ಆರಕ್ಷಕ ಉಪಾಧೀಕ್ಷಕರು |
| ವಾಸಸ್ಥಳ | : | ಬೆಂಗಳೂರು ನಗರ |

ಃ ಕಲಂ 299 ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷಿಯ ಹೇಳಿಕೆ ಃ

ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ

ನಾನು 1999 ರಿಂದ 2002ನೇ ಇಸವಿಯವರೆಗೂ ಚಿಕ್ಕಬಳ್ಳಾಪುರ ವೃತ್ತದ ವೃತ್ತನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿನಾಂಕ 24.03.2002 ರಂದು ಚಿಕ್ಕಬಳ್ಳಾಪುರ ಆರಕ್ಷಕ ಉಪಾಧೀಕ್ಷಕರ ಮೆಮೋ ನಂ.ಎಸ್‌ಜಿಪಿಓಸಿಹೆಚ್‌ಸಿ-23/02 ದಿನಾಂಕ 24.03.2002 ರ ಆದೇಶದಂತೆ ಗೌರಿಬಿದನೂರು ನಗರ ಠಾಣೆಯ ಮೊ.ಸಂ.50/2002 ಕಲಂ.332, 307 ಜೊತೆವಾಚಕ ಕಲಂ 34 ಐಪಿಸಿ ರೀತ್ಯಾ ದಾಖಲಾಗಿದ್ದ ಪ್ರಕರಣದ ಮುಂದಿನ ತನಿಖೆಯನ್ನು

*ವಹಿಸಿಕೊಂಡು, ಕಡತವನ್ನು ಪರಿಶೀಲಿಸಿ ತನಿಖೆಯು ಕ್ರಮವಾಗಿರುತ್ತದೆ. ನಂತರ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಸಾಕ್ಷಿದಾರರಾದ ಚಾಸಾ4, ಚಾಸಾ5, ಚಾಸಾ6, ಚಾಸಾ7, ಚಾಸಾ12, ಚಾಸಾ13, ಚಾಸಾ14 ರವರ ಹೇಳಿಕೆಗಳನ್ನು ಪಡೆದು ತನಿಖೆ ಪೂರ್ಣಗೊಂಡಿದ್ದರಿಂದ ದಿನಾಂಕ 16.03.2002 ರಂದು ಆರೋಪಿತರ ವಿರುದ್ಧ ಅಂತಿಮ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಕರಣದ ಆರೋಪಿಗಳನ್ನು ನೋಡಿರುತ್ತೇನೆ, ಪುನಃ ನೋಡಿದರೆ ಗುರ್ತಿಸುತ್ತೇನೆ.*

***ಪಾಟೀಸವಾಲು: ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿನ ವಿಚಾರಣೆಯಾಗಿರುವುದರಿಂದ ಪಾಟೀ ಸವಾಲು ಇರುವುದಿಲ್ಲ.***

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 04.02.2019 ರಂದು ಬೆರಳಚ್ಚು ನಕಲುಗಾರ್ತಿಯಿಂದ ಬೆರಳಚ್ಚು ಮಾಡಿಸಲಾಯಿತು)*

ಓದಿ ಹೇ ಕೇ ಸರಿ ಇದೆ

ಸಹಿ/-

(ಭಾನುಮತಿ.ಬಿ.ಸಿ.)

ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,

ಚಿಕ್ಕಬಳ್ಳಾಪುರ.